**ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ರವಿಕುಮಾರ್.ಎನ್ ಇವರು ನಿಯಮ-330 ರಡಿಯಲ್ಲಿ ನೀಡಿರುವ ಸೂಚನೆಯ ವಿಷಯದ ಕುರಿತು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಖಾತೆಯ ಉಸ್ತುವಾರಿ ಹೊಂದಿರುವ ಮುಖ್ಯಮಂತ್ರಿಗಳ ಹೇಳಿಕೆ.**

ರಾಮನಗರ ಜಿಲ್ಲೆಯ ಕನಕಪುರ ತಾಲ್ಲೂಕಿನ ಸಾತನೂರು ಹೋಬಳಿ ಅಚ್ಚಲು ಗ್ರಾಮ ಪಂಚಾಯತಿಯ ಪಿಡಿಓ ರವರು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಲ್ಲಿ (MGNREGA) ಕಾಮಗಾರಿಗಳಿಗಾಗಿ ಸಾಮಗ್ರಿ ವೆಚ್ಚವನ್ನು ತಮ್ಮ ಸಂಬಂಧಿಕರ ಹೆಸರಿನಲ್ಲಿ ಡ್ರಾ ಮಾಡಿ ಪಾವತಿಸಿರುವುದಲ್ಲದೆ, ಈ ಯೋಜನೆಯ ಫಲಾನುಭವಿಗಳಾಗಿ ಶಾಲಾ, ಕಾಲೇಜು ವಿದ್ಯಾರ್ಥಿಗಳು, ಸರಕಾರಿ ನೌಕಾರರು, ಇವರಿಗೆ ಜಾಬ್ ಕಾರ್ಡ್ ಮಾಡಿಸಿರುವುದಾಗಿದೆ. ಸರಕಾರಿ ಜಮೀನಿನುಗಳಲ್ಲಿ ತಮ್ಮ ಆಪ್ತರಿಗೆ ಮನೆ ಕಟ್ಟಲು ಸಹಕರಿಸಿ ನಿಯಮಗಳಿಗೆ ವಿರುದ್ಧವಾಗಿ ನಮೂನೆ-9ರಲ್ಲಿ ಎ-ಖಾತವನ್ನು ನೀಡಿರುವುದಾಗಿದೆ. ಗ್ರಾಮ ಪಂಚಾಯತಿಯ ವ್ಯಾಪ್ತಿಯಲ್ಲಿ ನಡೆಯುತ್ತಿರುವ ಅಕ್ರಮ ಗಣಿಗಾರಿಕೆಗೆ ಪ್ರೋತ್ಸಾಹ ನೀಡುವ ಮೂಲಕ ಅಪಾರ ಪ್ರಮಾಣದ ಅಕ್ರಮ ಆಸ್ತಿಗಳನ್ನು ಮಾಡಿಕೊಂಡಿರುವುದಾಗಿದೆ. ಟೆಂಡರ್ ಕರೆಯದೆ ಕೆ.ಟಿ.ಟಿ.ಪಿ ನಿಯಮ ಉಲ್ಲಂಘನೆ ಮಾಡಿ ಸಕಾರಕ್ಕೆ 5403.61 ಲಕ್ಷ ರೂಗಳ ನಷ್ಟ ಉಂಟು ಮಾಡಿರುವ ಕುರಿತಾಗಿಯು ದೂರುಗಳಿವೆ. ಅಲ್ಲದೇ ಇದೆ ತಾಲ್ಲೂಕಿನ ಮೀನುಗಾರಿಕೆ ಇಲಾಖೆಯ ಸಹಾಯಕ ನಿರ್ದೇಶಕರು ಸುಮಾರು 13 ವರ್ಷಗಳಿಂದ ಒಂದೇ ಕಛೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಮೀನುಗಾರರಲ್ಲದವರನ್ನು ಮೀನುಗಾರರೆಂದು ಪ್ರಮಾಣಿಕರಿಸಿ ನಕಲಿ ಮೀನುಗಾರರ ಸಮಗ್ರ ನೋಂದಾಣಿ ಮಾಡಿ ಕೊಟ್ಟಿರುವುದಲ್ಲದೇ ತಮ್ಮ ಮಗಳನ್ನೇ ಸಿ.ಇ.ಓ ಆಗಿ ನೇಮಿಸಿ ಸರಕಾರಕ್ಕೆ ಮೋಸ ಮಾಡಿರುವುದಾಗಿದೆ. ಅಲ್ಲದೇ ಖಾಸಗಿ ಕಂಪನಿಗಳಿಂದ ಕಳೆ ಗುಣಮಟ್ಟದ ಸಲಕರಣೆಗಳನ್ನು ಖರೀದಿಸಿ ಮೀನುಗಾರರಿಗೆ ವಿತರಿಸದೆ ಮಾರಾಟ ಮಾಡಿರುವುದಾಗಿದೆ. ಮತ್ಸಾಶ್ರಯ ಯೋಜನೆಯ ಮನೆಗಳನ್ನು ಅರ್ಹ ಫಲಾನುಭವಿಗಳಿಗೆ ನೀಡದೇ ಮಾರಿಕೊಂಡಿರುತ್ತಾರೆ. ಮತ್ಸಾ ಸಂಪದ ಯೋಜನೆಯನ್ನು ಭಾರಿ ಅವ್ಯವಹಾರ ನಡೆಸಿರುತ್ತಾರೆ. ಈ ಎಲ್ಲಾ ವಿಷಯಗಳ ಕುರಿತು ಚರ್ಚಿಸಲು ನಿಯಮ-330 ರ ಅನ್ವಯ ಅನುವು ಮಾಡಿಕೊಡುವಂತೆ ವಿನಂತಿಸುತ್ತೇನೆ.

******

ಕನಕಪುರ ತಾಲ್ಲೂಕಿನ ಅಚ್ಚಲು ಗ್ರಾಮ ಪಂಚಾಯತಿಯ ಪಂಚಾಯತಿ ಅಭಿವೃದ್ಧಿ ಅಧಿಕಾರಿ ಮತ್ತು ಮೀನುಗಾರಿಕೆ ಇಲಾಖೆಯ ಸಹಾಯಕ ನಿರ್ದೇಶಕರ ವಿರುದ್ಧ ಮಾಡಲಾಗಿರುವ ಅಪಾದನೆಗಳು ತುಂಬಾ ಗಂಬೀರ ಸ್ವರೂಪದಾಗಿದ್ದು, ವಿವರವಾದ ತನಿಖೆ ನಡೆಸುವುದು ಅಗತ್ಯವಿರುತ್ತದೆ.

ಆದ್ದರಿಂದ ಮುಖ್ಯ ಲೆಕ್ಕಾಧಿಕಾರಿಗಳು, ಜಿಲ್ಲಾ ಪಂಚಾಯತಿ ರಾಮನಗರ ಇವರ ನೇತೃತ್ವದಲ್ಲಿ ತನಿಖಾ ತಂಡವನ್ನು ರಚಿಸಲಾಗಿದ್ದು, ತನಿಖೆ ನಡೆಸಿ ವಿವರವಾದ ವರದಿಯನ್ನು ನೀಡಲು ಸೂಚಿಸಲಾಗಿರುತ್ತದೆ. (ಪ್ರತಿ ಲಗತ್ತಿಸಿದೆ) ತನಿಖಾ ತಂಡದ ವರದಿಯನ್ನು ಪರಿಶೀಲಿಸಿ, ಅಗತ್ಯ ಕ್ರಮವಹಿಸಿ, ತೆಗೆದುಕೊಂಡ ಕ್ರಮದ ವರದಿಯನ್ನು ಸದನಕ್ಕೆ ಸಲ್ಲಿಸಲಾಗುವುದು.

ಬಸವರಾಜ ಬೊಮ್ಮಾಯಿ
ಮುಖ್ಯಮಂತ್ರಿ

ಕರ್ನಾಟಕ ಸರ್ಕಾರ
ರಾಮನಗರ ಜಿಲ್ಲಾ ಪಂಚಾಯತ್
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಕಛೇರಿ, ಪಂಚಾಯತ್ ಭವನ, ಬಿ.ಎಂ.ರಸ್ತೆ, ರಾಮನಗರ 562159.

ಸಂಖ್ಯೆ: ರಾಜಿಪಂ/ಸಿ9/ಎಲ್.ಸಿ.ಕ್ಯೂ/146ನೇಲಾ/2021-22. ದಿನಾಂಕ:21.12.2022.

**ರವರಿಗೆ,**
ಮಾನ್ಯ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು-01.

**ಮಾನ್ಯರೆ,**

**ವಿಷಯ:-** ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ರವಿಕುಮಾರ್ ಎನ್. (ವಿಧಾನ ಸಭಾ ಚುನಾವಣಾ ಕ್ಷೇತ್ರ) ರವರ 330ನೇ ನಿಯಮದ ಮೇರೆಗೆ ಉತ್ತರಿಸುವ ಬಗ್ಗೆ.
**ಉಲ್ಲೇಖ:-** ಕರ್ನಾಟಕ ವಿಧಾನ ಪರಿಷತ್ 330ನೇ ನಿಯಮದ ಸೂಚನೆ ದಿನಾಂಕ:08.12.2022.

*****0*****

ವಿಷಯಕ್ಕೆ ಸಂಬಂಧಿಸಿದಂತೆ, ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ರವಿಕುಮಾರ್ ಎನ್. (ವಿಧಾನ ಸಭಾ ಚುನಾವಣಾ ಕ್ಷೇತ್ರ) ರವರ 330ನೇ ನಿಯಮದ ಸೂಚನೆ ದಿನಾಂಕ:08.12.2022 ರಲ್ಲಿ, ರಾಮನಗರ ಜಿಲ್ಲೆ, ಕನಕಪುರ ತಾಲ್ಲೂಕು ಅಚ್ಚಲು ಗ್ರಾಮ ಪಂಚಾಯಿತಿಗೆ ಸಂಬಂಧಿಸಿದ ಮಾಹಿತಿಯನ್ನು ಕೋರಿರುತ್ತಾರೆ.

ಈ ಸಂಬಂಧ ಕಛೇರಿ ಹಂತದಲ್ಲಿ ತನಿಖಾ ತಂಡವನ್ನು ರಚಿಸಲಾಗಿದೆ. ಸದರಿ ತಂಡವು ಸಲ್ಲಿಸುವ ವರದಿಯನ್ವಯ ನಿಯಮಾನುಸಾರ ಕ್ರಮ ಕೈಗೊಂಡು ತೆಗೆದುಕೊಂಡ ಕ್ರಮದ ಬಗ್ಗೆ ವರದಿ ಸಲ್ಲಿಸಲಾಗುವುದು ಎಂಬ ಅಂಶವನ್ನು ತಮ್ಮ ಅವಗಾಹನೆಗೆ ಸಲ್ಲಿಸಿದೆ.
(**ಲಗತ್ತು:-** ತನಿಖಾ ತಂಡದ ಆದೇಶದ ಪ್ರತಿ)

ತಮ್ಮ ವಿಶ್ವಾಸಿ

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ,
ರಾಮನಗರ ಜಿಲ್ಲಾ ಪಂಚಾಯತ್.

**ಕರ್ನಾಟಕ ಸರ್ಕಾರ**
**ರಾಮನಗರ ಜಿಲ್ಲಾ ಪಂಚಾಯತ್**
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಕಛೇರಿ, ಪಂಚಾಯತ್ ಭವನ, ಬಿ.ಎಂ.ರಸ್ತೆ, ರಾಮನಗರ-562159.

ಸಂಖ್ಯೆ: ರಾಜಿಪಂ/ಸಿ9/ಎಲ್.ಸಿ.ಕ್ಯೂ/146ನೇಅ/2021-22. ದಿನಾಂಕ:21.12.2022.

**ಅಧಿಕೃತ ಜ್ಞಾಪನ**

**ವಿಷಯ:**- ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ರವಿಕುಮಾರ್ ಎನ್. (ವಿಧಾನ ಸಭಾ ಚುನಾವಣಾ ಕ್ಷೇತ್ರ) ರವರ 330ನೇ ನಿಯಮದ ಮೇರೆಗೆ ಉತ್ತರಿಸುವ ಬಗ್ಗೆ.

**ಉಲ್ಲೇಖ:**-. ಕರ್ನಾಟಕ ವಿಧಾನ ಪರಿಷತ್ 330ನೇ ನಿಯಮದ ಸೂಚನೆ ದಿನಾಂಕ:08.12.2022.

*****0*****

ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ರವಿಕುಮಾರ್ ಎನ್. (ವಿಧಾನ ಸಭಾ ಚುನಾವಣಾ ಕ್ಷೇತ್ರ) ರವರ 330ನೇ ನಿಯಮದ ಸೂಚನೆ ದಿನಾಂಕ:08.12.2022 ಕ್ಕೆ ರಾಮನಗರ ಜಿಲ್ಲೆ ಕನಕಪುರ ತಾಲ್ಲೂಕು ಅಚ್ಚಲು ಗ್ರಾಮ ಪಂಚಾಯಿತಿಗೆ ಸಂಬಂಧಿಸಿದಂತೆ ಮಾಹಿತಿಯನ್ನು ಕೋರಿದ್ದು, ಸದರಿರವರು ಕೋರಿರುವ ಮಾಹಿತಿಯನ್ನು ಸರ್ಕಾರಕ್ಕೆ ಸಲ್ಲಿಸುವ ಸಂಬಂಧ ಈ ಕೆಳಕಂಡ ತನಿಖಾ ತಂಡವನ್ನು ನೇಮಕ ಮಾಡಲಾಗಿದೆ.

ಈ ಸಂಬಂಧ, ಸದರಿ ಅಧಿಕಾರಿ/ಸಿಬ್ಬಂದಿಗಳು ಕನಕಪುರ ತಾಲ್ಲೂಕು ಅಚ್ಚಲು ಗ್ರಾಮ ಪಂಚಾಯಿತಿಗೆ ಭೇಟಿ ನೀಡಿ ನಿಯಮಾನುಸಾರ ಪರಿಶೀಲಿಸಿ, ಅಗತ್ಯ ದಾಖಲೆಗಳೊಂದಿಗೆ ವಿವರವಾದ ವರದಿಯನ್ನು ನೀಡಲು ಸೂಚಿಸಿದೆ.

**ತನಿಖಾ ತಂಡದ ವಿವರ:**

| ಕ್ರ. ಸಂ | ಅಧಿಕಾರಿ/ಸಿಬ್ಬಂದಿಯ ಹೆಸರು | ಹುದ್ದೆ/ಪದನಾಮ |
|---|---|---|
| 1 | ಶ್ರೀಮತಿ ರಾಧಾ ಪಿ. | ಮುಖ್ಯ ಲೆಕ್ಕಾಧಿಕಾರಿಗಳು, ರಾಮನಗರ ಜಿಲ್ಲಾ ಪಂಚಾಯತ್. |
| 2 | ಶ್ರೀಮತಿ ಅನಿತಾ | ಯೋಜನಾ ಅಂದಾಜು ಮತ್ತು ಮೌಲ್ಯಮಾಪನಾಧಿಕಾರಿ, ಯೋಜನಾ ಶಾಖೆ, ರಾಮನಗರ ಜಿಲ್ಲಾ ಪಂಚಾಯತ್ |
| 3 | ಶ್ರೀ ರೂಪೇಶ್‌ಕುಮಾರ್ | ಸಹಾಯಕ ನಿರ್ದೇಶಕರು (ಗ್ರಾಉ) ತಾಲ್ಲೂಕು ಪಂಚಾಯಿತಿ, ರಾಮನಗರ. |
| 4 | ಶ್ರೀ ಜಗದೀಪ್ | ಎ.ಡಿ.ಪಿ.ಸಿ. ನರೇಗಾ ಶಾಖೆ ರಾಮನಗರ ಜಿಲ್ಲಾ ಪಂಚಾಯತ್. |
| 5 | ಶ್ರೀ ತೇಜೇಶ್‌ಗೌಡ | ಡಿ.ಪಿ.ಎಂ.ಯು ರಾಮನಗರ ಜಿಲ್ಲಾ ಪಂಚಾಯತ್, ರಾಮನಗರ. |

ತಮ್ಮ ವಿಶ್ವಾಸಿ

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ,
ರಾಮನಗರ ಜಿಲ್ಲಾ ಪಂಚಾಯತ್.

ಗೆ,

1) ಶ್ರೀಮತಿ ರಾಧಾ ಪಿ., ಮುಖ್ಯ ಲೆಕ್ಕಾಧಿಕಾರಿಗಳು, ರಾಮನಗರ ಜಿಲ್ಲಾ ಪಂಚಾಯತ್.

2) ಶ್ರೀಮತಿ ಅನಿತಾ, ಯೋಜನಾ ಅಂದಾಜು ಮತ್ತು ಮೌಲ್ಯಮಾಪನಾಧಿಕಾರಿ, ಯೋಜನಾ ಶಾಖೆ, ರಾಮನಗರ ಜಿಲ್ಲಾ ಪಂಚಾಯತ್.

3) ಶ್ರೀ ರೂಪೇಶ್‌ಕುಮಾರ್, ಸಹಾಯಕ ನಿರ್ದೇಶಕರು (ಗ್ರಾಉ), ತಾಲ್ಲೂಕು ಪಂಚಾಯಿತಿ, ರಾಮನಗರ.